ಕೊಳಚೆ ಪ್ರದೇಶಾಭಿವೃದ್ಧಿಗಾಗಿ ಕೇಂದ್ರದಿಂದ ಹಣ

527 (827) ಶ್ರೀ ಯು.ಬಿ. ಬಣಕರ್, (ಹಿರೇಕೆರೂರು): ಶ್ರೀ ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳಚೆ ಪ್ರದೇಶ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು?

ಆ) 1996-97ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಹಾಕಿಕೊಂಡ ಕಾರ್ಯಕ್ರಮಗಳು ಯಾವುವು;

ಶ್ರೀ ಹೆಚ್.ಡಿ ರೇವಣ್ಣ (ವಸತಿ ಸಚಿವರು):

ಅ) 1996-97ನೇ ಸಾಲಿನಲ್ಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ವಿಶೇಷವಾಗಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಅನುದಾನ ನಿಗಧಿಪಡಿಸಲಾಗಿದ್ದು, ಕರ್ನಾಟಕ ರಾಜ್ಯಕ್ಕೆ ರಾಜ್ಯದಲ್ಲಿನ ಕೊಳಚೆ ಪ್ರದೇಶಗಳ ಜನಸಂಖ್ಯೆಗನುಗುಣವಾಗಿ 12.64 ಕೋಟಿ ರೂ.ಗಳನ್ನು ನಿಗಧಿಪಡಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಕೇಂದ್ರ ಸರ್ಕಾರವು ಕೆಲವು ಮಾರ್ಗಸೂಚಿ ಸೂತ್ರಗಳನ್ನು ನೀಡಿದ್ದು ನೀಡಿರುವ ಮಾರ್ಗಸೂಚಿ ಸೂತ್ರಗಳ ಬಗ್ಗೆ ಕೇಂದ್ರ ಸರ್ಕಾರದ ಸ್ಪಷ್ಟೀಕರಣ ಕೋರಲಾಗಿದೆ ಹಾಗೂ ಈ ಯೋಜನೆಗೆ ಸಂಬಂಧಿಸಿದಂತೆ ಉನ್ನತ ಮಟ್ಟದಲ್ಲಿ ಚರ್ಚಿಸಿ ನಿರ್ದಿಷ್ಟ ರೂಪುರೇಖೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಈ ವರೆಗೆ ಈ ಯೋಜನೆಯಡಿಯಲ್ಲಿ 9.48 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಗೆ ಬಿಡುಗಡೆ ಮಾಡಿದೆ.

ಆ) ಮಂಡಳಿಯು ಕೊಳಚೆ ನಿವಾಸಿಗಳ ಜೀವನಮಟ್ಟ ಸುಧಾರಿಸಲು ಹಮ್ಮಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳು ಈ ಕೆಳಕಂಡಂತಿರುತ್ತವೆ.

1) ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆ:

ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

2) ವಸತಿ ಗೃಹ ಯೋಜನೆ:

ವಸತಿ ಗೃಹಗಳನ್ನು ನಿರ್ಮಿತ ಕೊಳಚೆ ನಿವಾಸಿಗಳಿಗೆ ಹಂಚುವುದು.

3) ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ಅನುದಾನದ ಯೋಜನೆ:

ಈ ಯೋಜನೆಯು ವಿಶೇಷವಾಗಿ ಪರಿಶಿಷ್ಟ ಜಾತಿ ಜನಾಂಗದವರ ಏಳಿಗೆಗಾಗಿ ಕಾಯ್ದಿರಿಸಲಾಗಿದೆ. ಈ ಯೋಜನೆಯನ್ನು 1996-97 ನೇ ಸಾಲಿನ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದು, ಅನುಷ್ಠಾನಗೊಳಿಸಲಾಗುವುದು.

4) ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ ಯೋಜನೆ:

ಈ ಯೋಜನೆಯಡಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಕೊಳಚೆ ಪ್ರದೇಶವನ್ನು ಮಾದರಿಯಾಗಿ ತೆಗೆದುಕೊಂಡು ಮೂಲಭೂತ ಸೌಲಭ್ಯ ಒದಗಿಸುವುದಾಗಿದೆ. ಹಾಗೂ ಈ ಯೋಜನೆಯನ್ನು 1996-97ನೇ ಸಾಲಿನ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದು, ಅನುಷ್ಠಾನಗೊಳಿಸಲಾಗುವುದು.

ಬೆಳೆ ವಿಮಾ ಯೋಜನೆ ಕುರಿತು

528 (830) ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ವಿಮಾ ಯೋಜನೆಯನ್ನು ಯಾವ ರೀತಿ ಜಾರಿಗೊಳಿಸಲಾಗುತ್ತಿದೆ.

ಆ) 1994-95 ಹಾಗೂ 1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಭತ್ತದ ಫೈರು ನಾಶವಾಗಿ ಯಾವ ಯಾವ ತಾಲ್ಲೂಕಿಗೆ ಎಷ್ಟು ವಿಮಾ ಪರಿಹಾರ ಹಣ ದೊರಕಿದೆ.

ಇ) ಇದುವರೆವಿಗೂ ವಿಮಾ ಪರಿಹಾರ ಹಣ ದೊರಕದೇ ಇದ್ದಲ್ಲಿ ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಬೆಳೆ ವಿಮಾ ಯೋಜನೆಯನ್ನು ರಾಜ್ಯದಲ್ಲಿ ಸರಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದ ರೈತರಿಗೆ ಅನ್ವಯವಾಗದಂತೆ ಜಾರಿಗೊಳಿಸಲಾಗುತ್ತದೆ.

ಆ) 1994-95ನೇ ಸಾಲಿನಲ್ಲಿ ಬೆಳೆ ನಾಶವಾಗಿಲ್ಲ ರಾಗಿ ಧಾರವಾಡ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿಯೂ ಭತ್ತದ ಬೆಳೆಗೆ ಬೆಳೆ ವಿಮಾ ನಷ್ಟ ಪರಿಹಾರವು ದೊರಕಿರುವುದಿಲ್ಲ.

1995-96 ನೇ ಸಾಲಿನಲ್ಲಿ ಭತ್ತದ ಬೆಳೆ ಬೆಳೆ ವಿಮಾ ನಷ್ಟ ಪರಿಹಾರವು ಇದುವರೆವಿಗೂ ನೀಡಿರುವುದಿಲ್ಲ.

ಇ) ರಾಜ್ಯ ಸರ್ಕಾರದ 1:3 ಭಾಗದ ಪಾಲನ್ನು ಸಾಮಾನ್ಯ ವಿಮಾ ನಿಗಮಕ್ಕೆ ಬಿಡುಗಡೆ ಮಾಡಿದ್ದು ಕೇಂದ್ರ ಸರ್ಕಾರದ ಪಾಲಾದ 2:3 ಭಾಗದ ಸಾಮಾನ್ಯ ವಿಮಾ ನಿಗಮಕ್ಕೆ ಶೀಘ್ರದಲ್ಲಿಯೇ ಬಿಡುಗಡೆಯಾಗಲಿದ್ದು, ಅದು ತಲುಪಿದ ಕೂಡಲೇ ಅರ್ಥ ರೈತರಿಗೆ ಪರಿಹಾರವನ್ನು ನೀಡಲಾಗುವುದು.

ಸರ್ಕಾರಿ ಭೂಮಿಯನ್ನು ಮಂಜೂರು ಮಂಜೂರಾತಿಗೆ ವಿವರ.

529 (815) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಶ್ರೀ ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯರಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಯಾವ ಉದ್ದೇಶಗಳಿಗಾಗಿ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಲಾಗುವುದು(ಉದ್ದೇಶದ ಸಂಪೂರ್ಣ ವಿವರ ನೀಡುವುದು